679472/2020/GEN-DCE

Received on 25/9/2020
WUP

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 4 (ಇ) ಸೇನಿಸೇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ 29.08.2020

## ಅಧಿಕೃತ ಜ್ಞಾಪನ

ವಿಷಯ: ಕೋವಿಡ್-19 ಸಂಬಂಧದಲ್ಲಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟಿರುವ ಸರ್ಕಾರಿ ನೌಕರರ ಪ್ರಕರಣಗಳ ನಿರ್ವಹಣೆ ಕುರಿತಂತೆ

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಆಇ 4 (ಇ) ಸೇನಿಸೇ 2020 ದಿನಾಂಕ 22.7.2020

******

ಸರ್ಕಾರಿ ನೌಕರನು ವಾಸವಿರುವ ಸ್ಥಳವನ್ನು ಕೋವಿಡ್-19 ವ್ಯಾಪ್ತಿತ ಪ್ರದೇಶವೆಂದು ಸಕ್ಷಮ ಪ್ರಾಧಿಕಾರವು ಘೋಷಿಸಿ ಸದರಿ ಕ್ಷೇತ್ರದೊಳಗೆ ಅಥವಾ ಅದರ ವ್ಯಾಪ್ತಿಯಿಂದ ಹೊರಗೆ ಸಂಚರಿಸುವಲ್ಲಿ ನಿರ್ಬಂಧವನ್ನು ವಿಧಿಸಿರುವಲ್ಲಿ ಅಥವಾ ಅಂತಹ ಸರ್ಕಾರಿ ನೌಕರನ ಕುಟುಂಬದ ಯಾವುದೇ ಸದಸ್ಯರು ಸದರಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟಿರುವ ಕಾರಣದಿಂದಾಗಿ ಅಂತಹ ಸರ್ಕಾರಿ ನೌಕರನು/ಕುಟುಂಬದ ಸದಸ್ಯರು ಹೊರಗಡೆ ಸಂಚರಿಸದೆ ಪ್ರತ್ಯೇಕತೆಯನ್ನು ಕಾಪಾಡಬೇಕಾಗುವ ಸಂದರ್ಭಗಳನ್ನು ಉಲ್ಲೇಖಿಸಿ ಸಕ್ಷಮ ಪ್ರಾಧಿಕಾರವು ಯಾವುದೇ ಸಂಚಾರವನ್ನು ನಿರ್ಬಂಧಿಸಿ ಹೊರಡಿಸಿರುವ ಆದೇಶದ ತತ್ಪರಿಣಾಮವಾಗಿ ಸರ್ಕಾರಿ ನೌಕರರು ತಮ್ಮ ದೈನಂದಿನ ಕಚೇರಿಯ ಕರ್ತವ್ಯಕ್ಕೆ ಹಾಜರಾಗುವಲ್ಲಿ ಅಡಚಣೆಯಿರುವಲ್ಲಿ, ಸಂದರ್ಭಾನುಸಾರ ದಿನಾಂಕ 22.7.2020ರ ಆದೇಶದಲ್ಲಿ ವಿಧಿಸಿರುವ ಇತರೆ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಅಂತಹ ಅವಧಿಯನ್ನು ವಿಶೇಷ ಸಾಂದರ್ಭಿಕ ರಜೆ ಎಂದು ಪರಿಗಣಿಸಿ ಸಕ್ಷಮ ಪ್ರಾಧಿಕಾರಗಳು ಮಂಜೂರು ಮಾಡುವಲ್ಲಿ ಆದೇಶಿಸಲಾಗಿದೆ.

ದಿನಾಂಕ 22.7.2020ರ ಆದೇಶದನ್ವಯ ಕಲ್ಪಿಸಲಾಗಿರುವ ವಿಶೇಷ ಸಾಂದರ್ಭಿಕ ರಜೆಯ ಸೌಲಭ್ಯಗಳು "ಸ್ವತಃ ಸರ್ಕಾರಿ ನೌಕರನೇ ಸದರಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟು ಚಿಕಿತ್ಸೆ ಪಡೆಯಬೇಕಾಗುವ ಪ್ರಕರಣಗಳಿಗೆ ಸಹ ಅನ್ವಯಿಸಿ ಮಂಜೂರು ಮಾಡುವಲ್ಲಿ ಅನ್ವಯಿಸುವ" ಕುರಿತು ಹಲವು ಸಕ್ಷಮ ಪ್ರಾಧಿಕಾರಿಗಳು ಸರ್ಕಾರದಿಂದ ನಿರ್ದಿಷ್ಟ ಸ್ಪಷ್ಟೀಕರಣವನ್ನು ಕೋರುತ್ತಿದೆ.

679472/2020/GEN-DCE



ದಿನಾಂಕ 22.7.2020ರ ಆದೇಶದ ಭಾಗದಲ್ಲಿನ ಅಂಶ (ii)ರಲ್ಲಿನ "If an employee is required to be in isolation on account of being primary contact of a patient in any pandemic or on account of the infection in the family/house hold" ಎಂಬ ಅವಕಾಶಗಳು "ಸ್ವತಃ ಸರ್ಕಾರಿ ನೌಕರನೇ ಸದರಿ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟು ಚಿಕಿತ್ಸೆ ಪಡೆಯಬೇಕಾಗುವ ಪ್ರಕರಣಗಳಿಗೆ ಸಹ ಅನ್ವಯಿಸತಕ್ಕದ್ದು" ಎಂಬುದಾಗಿ ಅರ್ಥೈಸತಕ್ಕದಾಗಿ ಈ ಮೂಲಕ ಸ್ಪಷ್ಟಪಡಿಸಲಾಗಿದೆ.

Suvarna BS

(ಬಿ.ಎಸ್.ಸುವರ್ಣ)

ಸರ್ಕಾರದ ಉಪಕಾರ್ಯದರ್ಶಿ

ಆರ್ಥಿಕ ಇಲಾಖೆ (ಸೇವೆಗಳು-1)

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂ:ಕಾಶಿಇ/ಶೈವಿ/66/ತರಗತಿ ಪ್ರಾರಂಭ/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.
ದಿನಾಂಕ:24-09-2020.

## *ಪರಿಚಯನಾದೇಶ*

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆಇ:4:(ಇ):ಸೇನಿಸೇ:2020 ದಿನಾಂಕ:29-08-2020ರ ಆದೇಶವನ್ನು ಈ ಕೆಳಕಂಡವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

<u>ಇವರಿಗೆ.</u>

1) ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು-ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಪ್ರಾದೇಶಿಕ ಜಂಟಿ ನಿರ್ದೇಶಕರು- ಬೆಂಗಳೂರು, ಮೈಸೂರು, ಮಂಗಳೂರು ಶಿವಮೊಗ್ಗ, ಧಾರವಾಡ, ಕಲಬುರಗಿ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ-
3) ಮಾಹಿತಿ ಅಧಿಕಾರಿಗಳು ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ ಬೆಂಗಳೂರು- ಈ ಸುತ್ತೋಲೆಯನ್ನು ಇಲಾಖೆ ವೆಬ್-ಸೈಟ್ ನಲ್ಲಿ ಪ್ರಕಟಿಸುವುದು.
4) ಕಛೇರಿ ಪ್ರತಿ